DAY — 14 SEAT NUMBER | | | | | | |

2025	III	01	1500	J-357	(K)

ECONOMICS (49)

Time : 3 Hrs. (7 Pages) Max. Marks : 80

ಸೂಚನೆ : *(1) ಎಲ್ಲ ಪ್ರಶ್ನೆಗಳನ್ನು ಬಿಡಿಸುವುದು ಅವಶ್ಯಕವಾಗಿದೆ.*

(2) ಅವಶ್ಯಕವಿದ್ದಲ್ಲಿ ಆಕೃತಿ / ಕೋಷ್ಟಕ ತೆಗೆಯಿರಿ.

(3) ಬಲಬದಿಯ ಅಂಕಗಳು ಪ್ರಶ್ನೆಗಳ ಪೂರ್ಣ ಗುಣಗಳನ್ನು ದರ್ಶಿಸುತ್ತವೆ.

(4) ಎಲ್ಲ ಮುಖ್ಯ ಪ್ರಶ್ನೆಗಳ ಉತ್ತರವನ್ನು ಹೊಸ ಪುಟದ ಮೇಲೆ ಪ್ರಾರಂಭಿಸಿರಿ.

ಪ್ರ. 1. (ಅ) ಆರ್ಥಿಕ ಪಾರಿಭಾಷಿಕ ಶಬ್ದ ಬರೆಯಿರಿ : (5) **[20]**

(1) ಬಯಕೆ ಹಣ ಕೊಟ್ಟು ಕೊಂಡುಕೊಳ್ಳುವ ಸಾಮರ್ಥ್ಯ ಹಾಗೂ ಮನಸ್ಸು.

(2) ಬೇಡಿಕೆಯನುಸಾರ ಹಣವನ್ನು ತೆಗೆದುಕೊಳ್ಳಬಹುದಾದ ತೇವಣಿ.

(3) ಉತ್ಪಾದನಾ ಪ್ರಕ್ರಿಯೆಯಲ್ಲಿ ಉಪಯೋಗಿಸಬಹುದಾದ ಬಂಡವಾಳದ ವಸ್ತುಗಳ ಸವೆತ (wear and tear).

(4) ಬೆಲೆಯಲ್ಲಿಯ ಪ್ರತಿಶತ ಬದಲಾವಣೆಯ ಪ್ರಮಾಣದಷ್ಟೆ ವಸ್ತುವಿನ ಬೇಡಿಕೆಯಲ್ಲಿ ಪ್ರತಿಶತ ಬದಲಾವಣೆ ಆಗುವ ಸ್ಥಿತಿಸ್ಥಾಪಕತ್ವ.

(5) ವಿಶಿಷ್ಟ ಕಾಲಾವಧಿಯಲ್ಲಿ ದೇಶದ ಆಯಾತ ಹಾಗೂ ನಿರ್ಯಾತ ಮೌಲ್ಯದಲ್ಲಿಯ ಅಂತರ.

(ಬ) ಸಹಸಂಬಂಧ ಪೂರ್ಣ ಮಾಡಿರಿ : (5)

(1) ಅಂತರ್ಗತ ವ್ಯಾಪಾರ : ಗೃಹ ವ್ಯಾಪಾರ : : ಅಂತರ ರಾಷ್ಟ್ರೀಯ ವ್ಯಾಪಾರ : ☐

(2) ಭಿನ್ನ ಬೆಲೆ : ☐ : : ಒಂದೇ ಬೆಲೆ : ಪೂರ್ಣಪೈಪೋಟಿ

(3) ☐ : ಮಧ್ಯವರ್ತಿ ಬ್ಯಾಂಕ : : SBI : ವ್ಯಾಪಾರಿ ಬ್ಯಾಂಕ

(4) ಉತ್ಪಾದನೆಯ ಪದ್ಧತಿ : ☐ : : ಉತ್ಪನ್ನ ಪದ್ಧತಿ : ಘಟಕ ಪದ್ದತಿ

(5) ಆರ್ಥಿಕ ಅತಿಪ್ರಸರಣ ಅವಧಿ : ಉಳಿತಾಯದ ಬಜೆಟ್ : : ಆರ್ಥಿಕ ಕುಸಿತದ ಅವಧಿ : ☐

(ಕ) ಗುಂಪಿನಲ್ಲಿ ಸೇರಲಾರದ ಶಬ್ದ ಗುರುತಿಸಿರಿ : (5)

(1) ತಾಳುವಿಕೆಯ ವಸ್ತು :

ಫರ್ನಿಚರ, ಕಪಾಟು, ಬಟ್ಟೆತೊಳೆಯುವ ಯಂತ್ರ, ಮೀನು

(2) ವೆಚ್ಚ ಸಂಕಲ್ಪನೆ :

ಒಟ್ಟುವೆಚ್ಚ, ಸರಾಸರಿ ವೆಚ್ಚ, ಸೀಮಾಂತ ವೆಚ್ಚ, ಮಾರಾಟದ ವೆಚ್ಚ

(3) ಕಾಯ್ದೆಯ ಏಕಸಾಮ್ಯ :

ಪೇಟೆಂಟ, ಓಪೆಕ್(OPEC),ಕಾಪಿರಾಯಿಟ್(copyright), ವ್ಯಾಪಾರ ಚಿನ್ಹೆ (Trademark).

(4) ಆರ್ಥಿಕ ಕಲ್ಯಾಣದ ಸಿದ್ಧಾಂತ :

ಉತ್ಪನ್ನ ಹಾಗೂ ಉದ್ಯೋಗ ಸಿದ್ಧಾಂತ, ಉತ್ಪಾದನೆಯ ಕ್ಷೇತ್ರದಲ್ಲಿಯ ಕಾರ್ಯಕ್ಷಮತೆ, ಉಪಭೋಗ ಕ್ಷೇತ್ರದಲ್ಲಿಯ ಕಾರ್ಯಕ್ಷಮತೆ, ಒಟ್ಟು ಆರ್ಥಿಕ ಕಾರ್ಯಕ್ಷಮತೆ.

(5) ಬೇಡಿಕೆಯ ನಿಯಮದ ಅಪವಾದಗಳು :

ಗಿಫೀನರ ವಿರೋಧಾಭಾಸ, ಪ್ರತಿಷ್ಠೆಯ ವಸ್ತುಗಳು, ಬೆಲೆಯ ಭ್ರಮೆ, ಶ್ರಮದ ಪೂರೈಕೆ.

(ಡ) ಕೆಳಗಿನ ವಿಧಾನವನ್ನು ಪೂರ್ಣ ಮಾಡಿರಿ : (5)

(1) ಸೂಕ್ಷ್ಮ ಅರ್ಥಶಾಸ್ತ್ರ ಹಾಗೂ ಸ್ಥೂಲ ಅರ್ಥಶಾಸ್ತ್ರ ಈ ಸಂಜ್ಞೆಗಳನ್ನು ಪ್ರಥಮ ಬಾರಿಗೆ ಉಪಯೋಗಿಸಿದ ನಾರ್ವೇಜಿಯನ್ ಅರ್ಥಶಾಸ್ತ್ರಜ್ಞ ..... .

(ಅ) ಆ್ಯಡಮ್ ಸ್ಮಿತ್

(ಬ) ಜೆ.ಎಮ್, ಕೆನ್ಸ

(ಕ) ಜೆ.ಬಿ.ಸೆ.

(ಡ) ರ್ಯಾಗ್ನರ್ ಫ್ರಿಶ್

(2) ಯಾವಾಗ ಪೂರೈಕೆಯ ವಕ್ರ ಮೇಲಿನ ದಿಶೆಯಲ್ಲಿ ಹೋಗುತ್ತದೆ ಆವಾಗ ಅದಕ್ಕೆ ಇರುವ ಇಳಿಜಾರು (slop) ..... ಇರುತ್ತದೆ.

(ಅ) ಧನಾತ್ಮಕ (ಬ) ಋಣಾತ್ಮಕ

(ಕ) ಪ್ರಥಮ ಧನಾತ್ಮಕ ನಂತರ ಋಣಾತ್ಮಕ ಇರುತ್ತದೆ (ಡ) ಶೂನ್ಯ

(3) ಬೆಲೆಯ ಸೂಚಾಂಕದ ಉಪಯೋಗ .....

(ಅ) ವಸ್ತುಗಳ ಬೆಲೆಯಲ್ಲಿಯ ಸಾಮಾನ್ಯ ಬದಲಾವಣೆಯನ್ನು ಅಳತೆ ಮಾಡುವ ಸಲುವಾಗಿ

(ಬ) ಭೌಗೋಲಿಕ ಸಾಧನವೆಂದು

(ಕ) ಹವೆಯ ಒತ್ತಡ ಅಳೆಯುವ ಸಲುವಾಗಿ

(ಡ) ವಸ್ತುವನ್ನು ಅಳೆಯುವ ಸಲುವಾಗಿ

(4) ವಿಕಾಸ ಹಣಕಾಸಿನ ಸಂಸ್ಥೆಯನ್ನು ಸ್ಥಾಪನೆ ಮಾಡಲಾಗಿರುವ ಕಾರಣ .....

(ಅ) ಅಲ್ಪ ಅವಧಿಯ ಸಲುವಾಗಿ ನಿಧಿಯನ್ನು ಉಪಲಬ್ಧ ಮಾಡಿ ಕೊಡುತ್ತದೆ.

(ಬ) ಕೃಷಿ , ಔದ್ಯೋಗಿಕ ಮತ್ತು ಇತರ ಕ್ಷೇತ್ರದ ವಿಕಾಸ ಹೆಚ್ಚಿಸುವ ಸಲುವಾಗಿ ಸಹಾಯ ಮಾಡುತ್ತದೆ.

(ಕ) ಹಣದ ಪೇಟೆಯ (money market) ನಿಯಮನ ಮಾಡುತ್ತದೆ.

(ಡ) ಬಂಡವಾಳ ಪೇಟೆಯ (capital market) ನಿಯಮನ ಮಾಡುತ್ತದೆ.

(5) ಸರಕಾರದ ಅನಿವಾರ್ಯ (obligatory) ಕಾರ್ಯ .....

(ಅ) ಶಿಕ್ಷಣ ಮತ್ತು ಆರೋಗ್ಯ ಸೇವೆಗಳು

(ಬ) ನಿವೃತ್ತಿ ವೇತನದ ಅವಕಾಶಗಳು

(ಕ) ಅಂತರ್ಗತ ಕಾಯ್ದೆ ಮತ್ತು ಸುವ್ಯವಸ್ಥೆ ಕಾಪಾಡುವುದು

(ಡ) ಕಲ್ಯಾಣಕಾರಿ ಯೋಜನೆಯ ಅವಕಾಶಗಳು

ಪ್ರ. 2. **(ಅ)** ಕೆಳಗಿನ ಉದಾಹರಣೆಯ ಆಧಾರದಿಂದ ಸಂಕಲ್ಪನೆಯನ್ನು ಗುರುತಿಸಿ ಅದನ್ನು ಸ್ಪಷ್ಟೀಕರಿಸಿರಿ **[12]**

(ಬೇಕಾದ ಮೂರು) : (6)

(1) ಅಭಿಜೀತನಿಗೆ 15 ಖುರ್ಚಿಗಳನ್ನು ಮಾರಾಟ ಮಾಡಿದ ನಂತರ 3000 ರೂಪಾಯಿ ಸಿಗುತ್ತದೆ. ಪ್ರತಿ ಖುರ್ಚಿಯಿಂದ ಆತನಿಗೆ 200 ರೂಪಾಯಿ ಪ್ರಾಪ್ತಿಯಾಗುತ್ತದೆ.

(2) ರಾಜಾರಾಮನು 25 ಕ್ವಿಂಟಲ್ ಗೋಧಿಯ ಉತ್ಪಾದನೆಯನ್ನು ತನ್ನ ಹೊಲದಲ್ಲಿ ತೆಗೆದನು. ಅದರಿಂದ 2 ಕ್ವಿಂಟಲ್ ಗೋಧಿಯನ್ನು ಸ್ವತದ ಕುಟುಂಬದ ಸಲುವಾಗಿ ಬದಿಗೆ ತೆಗೆದನು.

(3) ರಾಣಿಯು ಭಾರತದ ರಾಷ್ಟ್ರೀಯ ಉತ್ಪನ್ನದ ಅಭ್ಯಾಸದ ಸಲುವಾಗಿ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿದಳು.

(4) ಅಮರನು ತನ್ನ ಚಹಾದ ಬಯಕೆಯನ್ನು ಈಡೇರಿಸಲು ಹಾಲು, ಸಕ್ಕರೆ ಹಾಗೂ ಚಹಾದ ಪುಡಿ ಇವನ್ನು ಒಟ್ಟಿಗೆ ಬೇಡಿಕೆಯನ್ನು ಮಾಡಿದನು.

(5) ಸುನೀತಾ ಮೆಡಮ್ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಚಾಕಪೀಸದಿಂದ ಕಪ್ಪು ಹಲಗೆಯ ಮೇಲೆ ಬರೆದು ತನ್ನ ಬಯಕೆಯನ್ನು ಪೂರ್ಣಗೊಳಿಸಿದಳು.

(ಬ) ವ್ಯತ್ಯಾಸವನ್ನು ಸ್ಪಷ್ಟೀಕರಿಸಿರಿ (ಬೇಕಾದ ಮೂರು) : (6)

(1) ಸೂಕ್ಷ್ಮ ಅರ್ಥಶಾಸ್ತ್ರ ಹಾಗೂ ಸ್ಥೂಲ ಅರ್ಥಶಾಸ್ತ್ರ

(2) ಸಂಪೂರ್ಣ ಸ್ಥಿತಿಸ್ಥಾಪಕತ್ವ ಬೇಡಿಕೆ ಮತ್ತು ಸಂಪೂರ್ಣ ಅಸ್ಥಿತಿಸ್ಥಾಪಕತ್ವ ಬೇಡಿಕೆ.

(3) ಸಂಖ್ಯಾತ್ಮಕ ಸೂಚಾಂಕ ಮತ್ತು ಮೌಲ್ಯ ಸೂಚಾಂಕ.

(4) ಅಂತರ್ಗತ ಸಾಲ ಮತ್ತು ಹೊರಗಿನ ಸಾಲ.

(5) ಪೂರೈಕೆಯ ವಿಸ್ತಾರ ಮತ್ತು ಪೂರೈಕೆಯಲ್ಲಿಯ ಹೆಚ್ಚಳ.

ಪ್ರ. 3. **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಬೇಕಾದ ಮೂರು):** **[12]**

(1) ಸೂಕ್ಷ್ಮ ಅರ್ಥಶಾಸ್ತ್ರದ ಯಾವುದಾದರೂ ನಾಲ್ಕು ವೈಶಿಷ್ಟ್ಯಗಳನ್ನು ಸ್ಪಷ್ಟೀಕರಿಸಿರಿ.

(2) ವಾಣಿಜ್ಯ ಬ್ಯಾಂಕಿನ ಕಾರ್ಯಗಳನ್ನು ಸ್ಪಷ್ಟೀಕರಿಸಿರಿ.

(3) ಸಮಯದನುಸಾರ ಮಾರುಕಟ್ಟೆಯ ಪ್ರಕಾರಗಳನ್ನು ಸ್ಪಷ್ಟೀಕರಿಸಿರಿ.

(4) ಕೆಳಗಿನ ಸಂಖ್ಯೆಗಳ ಮೇಲಿಂದ ಬೆಲೆಯ ಸೂಚಾಂಕವನ್ನು ತೆಗೆಯಿರಿ:

ವಸ್ತು	ಅ	ಬ	ಕ	ಡ
2005ರಲ್ಲಿಯ ಬೆಲೆ (ರೂ)	6	16	24	4
2010ರಲ್ಲಿಯ ಬೆಲೆ (ರೂ)	8	18	28	6

(5) ಭಾರತದ ವಿದೇಶಿ ವ್ಯಾಪಾರದ ಪಾತ್ರವನ್ನು ಯಾವುದಾದರೂ ನಾಲ್ಕು ಅಂಶಗಳ ಆಧಾರದಿಂದ ಸ್ಪಷ್ಟೀಕರಿಸಿರಿ.

ಪ್ರ. 4. ಕೆಳಗಿನ ವಿಧಾನಗಳಿಗೆ ತಮ್ಮ ಒಪ್ಪಿಗೆ ಇರುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಕಾರಣಸಹಿತ ಸ್ಪಷ್ಟೀಕರಿಸಿರಿ (ಬೇಕಾದ ಮೂರು): **[12]**

(1) ಬೇಡಿಕೆಯ ವಕ್ರ ಎಡಬದಿಯಿಂದ ಬಲಬದಿಯ ಕಡೆಗೆ ಮೇಲಿನಿಂದ ಕೆಳಗೆ ಬರುತ್ತದೆ.

(2) ಸೂಚಾಂಕದ ಸಂಖ್ಯೆಗಳಿಗೆ ಯಾವುದೇ ದೋಷಗಳಿರುವದಿಲ್ಲ.

(3) ಬೇಡಿಕೆಯ ಸ್ಥಿತಿಸ್ಥಾಪಕತ್ವವು ಹಲವಾರು ಅಂಶಗಳ ಮೇಲೆ ಅವಲಂಬಿಸಿರುತ್ತದೆ.

(4) ಪೂರೈಕೆಯ ನಿಯಮದ ಕೆಲವು ಅಪವಾದದ ಅಂಶಗಳಿರುತ್ತವೆ.

(5) ಭಾರತದ ಅರ್ಥವ್ಯವಸ್ಥೆಯಲ್ಲಿ ಬಂಡವಾಳ ಪೇಟೆಯು ಮಹತ್ವದ ಪಾತ್ರ ಹೊಂದಿರುತ್ತದೆ.

ಪ್ರ. 5. ಕೆಳಗಿನ ಕೋಷ್ಟಕ, ಆಕೃತಿ, ವಿವರಣೆ ಅಭ್ಯಾಸದಿಂದ ವಿಚಾರಿಸಿದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ (ಬೇಕಾದ ಎರಡು) : **[8]**

(i) ಕೋಷ್ಟಕದ ನಿರೀಕ್ಷಣೆ ಮಾಡಿ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **(4)**

ಬೆಲೆ (ರೂ)	ಬೇಡಿಕೆ (ಕಿಲೋ)		ಮಾರುಕಟ್ಟೆಯ	
	ಬೇಡಿಕೆ (ಕಿಲೋ) ಅ	ಉಪಭೋಗಕಾರ ಬ	ಉಪಭೋಗಕಾರ ಕ	ಉಪಭೋಗಕಾರ ಅ+ ಬ + ಕ
35	5	10	15	
30	10	15	20	
25	15	20	25	
20	20	25	30	

(ಅ) ಮೇಲಿನ ಮಾರುಕಟ್ಟೆ ಬೇಡಿಕೆಯ ಕೋಷ್ಟಕ ಪೂರ್ಣಮಾಡಿರಿ. (2)

(ಬ) ಮೇಲಿನ ಮಾರುಕಟ್ಟೆಯ ಬೇಡಿಕೆಯ ಕೋಷ್ಟಕದ ಮೇಲಿಂದ ಮಾರುಕಟ್ಟೆಯ ಬೇಡಿಕೆಯ ವಕ್ರ ತೆಗೆಯಿರಿ. (2)

(ii) ಕೆಳಗಿನ ಆಕೃತಿಯು ರೇಖಾತ್ಮಕವಲ್ಲದ (non-linear) ಬೇಡಿಕೆಯ ವಕ್ರ ಇರುತ್ತದೆ. ಆಕೃತಿಯ ಆಧಾರದಿಂದ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (4)

ರೇಖಾತ್ಮಕವಲ್ಲದ ಬೇಡಿಕೆಯ ವಕ್ರ



ವಸ್ತುವಿನ ಬೇಡಿಕ (Demand of Commodity)

(1) ಒಂದು ವೇಳೆ EB = EA (Ed = 1) (1)

(2) ಒಂದು ವೇಳೆ EB > EA (Ed > 1) (1)

(3) ಒಂದು ವೇಳೆ EB < EA (Ed < 1) (1)

(4) 'X' ಅಕ್ಷದಲ್ಲಿ ವಸ್ತುವಿನ ..... ತೋರಿಸಲಾಗಿದೆ. (1)

'Y' ಅಕ್ಷದಲ್ಲಿ ವಸ್ತುವಿನ ..... ತೋರಿಸಲಾಗಿದೆ.

(iii) ನಿಯಂತ್ರಣದ ಮಾರುಕಟ್ಟೆ : (4)

ನಿಯಂತ್ರಣದ ಮಾರುಕಟ್ಟೆ ಇದು ಇಂತಹ ತೋಕ ಮಾರುಕಟ್ಟೆಯಾಗಿರುತ್ತದೆ. ಅಲ್ಲಿಯ ಖರೀದಿ-ವಿಕ್ರಿಯ ವ್ಯವಹಾರ ರಾಜ್ಯ ಸರಕಾರವು ಮಾರುಕಟ್ಟೆ ಸಮಿತಿಯ ಮುಖಾಂತರ ನಿಯಂತ್ರಣ ಇಡುತ್ತದೆ.

ನಿಯಂತ್ರಣದ ಮಾರುಕಟ್ಟೆಯ ಪ್ರಮುಖ ಉದ್ದೇಶವು ಮಾರಾಟಗಾರರಿಗೆ ಮತ್ತು ಉತ್ಪಾದಕರಿಗೆ ವಿವಿಧ ಸೌಲಭ್ಯ ಉಪಲಬ್ಧ ಮಾಡಿ ಕೊಡುವದು ಅದರಂತೆ

ಮಾರುಕಟ್ಟೆಯಲ್ಲಿಯ ಅನೈತಿಕ, ಅನಿಷ್ಟ ರೂಢಿ ಮತ್ತು ಅಪ್ರಾಮಾಣಿಕತನ, ವಂಚನೆ ಇವುಗಳನ್ನು ನಿಯಂತ್ರಣ ಮಾಡುವದು ಆಗಿರುತ್ತದೆ. ಪ್ರಾಮುಖ್ಯವಾಗಿ ಕೃಷಿ ವಿಪಣನ ಮಾರುಕಟ್ಟೆಯಲ್ಲಿ ಪ್ರಾಥಮಿಕ ಮತ್ತು ದುಯ್ಯಮ ಮಾರುಕಟ್ಟೆಯಲ್ಲಿ ತಪ್ಪಾದ ಆಳತೆ ಅಂದರೆ ನಗದು ವ್ಯವಹಾರ, ಕಡಿಮೆ ತೂಕ, ಅಧಿಕ ಮಾರುಕಟ್ಟೆಯ ಶುಲ್ಕ ,ಅನಧಿಕೃತ ಕಡಿತ, ಉತ್ಪಾದನೆಯಲ್ಲಿ ಕಲಬೆರಿಕೆ, ಅದರಂತೆ ಮಾರಾಟಗಾರ ಮತ್ತು ಖರೀದಿಗಾರರಲ್ಲಿ ವಾದ ಬಿಡಿಸುವ ಸಲುವಾಗಿ ಯಂತ್ರಣದ ಕೊರತೆ ಇಂತಹ ಅಡಚಣೆ ಇರುತ್ತವೆ. ಎಲ್ಲ ದೋಷ ಮತ್ತು ಅಡೆತಡೆಯನ್ನು ನಿಯಂತ್ರಣದ ಮಾರುಕಟ್ಟೆಯ ಸ್ಥಾಪನೆಯಿಂದ ದೂರ ಮಾಡಲಾಗಿದೆ. 1939 ರಲ್ಲಿ ಮಾಡಲಾಗಿರುವ "ಬಾಂಬೆ ಅಗ್ರಿಕಲ್ಚರ್ ಪ್ರೊಡಕ್ಟ ಮಾರ್ಕೆಟ ಆ್ಯಕ್ಟ" ಅನುಸಾರ ಈ ಮಾರುಕಟ್ಟೆಯನ್ನು ನಿಯಂತ್ರಣದಲ್ಲಿ ಇಡಲಾಗುತ್ತದೆ. ಈ ಮಾರುಕಟ್ಟೆಯಲ್ಲಿ ಪ್ರಾಮುಖ್ಯವಾಗಿ ತೃಣಧಾನ್ಯ, ಹಣ್ಣು , ತಂಬಾಕು, ಹತ್ತು, ಶೇಂಗಾ, ಧಾನ್ಯ, ಟೆಂಗಿನಕಾಯಿ, ಅಡಕೆ, ಬಟಾಟೆ ಮತ್ತು ಅರಿಷಿಣ ಇದರ ವ್ಯಾಪಾರವನ್ನು ನಿಯಂತ್ರಣದಲ್ಲಿ ಇಡಲಾಗುತ್ತದೆ.

ಪ್ರಶ್ನೆಗಳು :

(1) ಯಾವ ಆ್ಯಕ್ಟ ಅನುಸಾರ ಮಾರುಕಟ್ಟೆಯನ್ನು ನಿಯಂತ್ರಣದಲ್ಲಿ ಇಡಲಾಗುತ್ತದೆ ? (1)

(2) ಪ್ರಾಥಮಿಕ ಮತ್ತು ದುಯ್ಯಮ ಮಾರುಕಟ್ಟೆಯಲ್ಲಿ ತಪ್ಪಾಗಿರುವ ಆಳತೆಗಳಾವವು ? (1)

(3) ಮೇಲಿನ ವಿವರಣೆಯ ವಿಷಯದ ಬಗ್ಗೆ ತಮ್ಮ ಅನಿಸಿಕೆಯನ್ನು ಬರೆಯಿರಿ. (2)

ಪ್ರ.6. ಸವಿಸ್ತಾರವಾಗಿ ಉತ್ತರ ಬರೆಯಿರಿ (ಬೇಕಾದ ಎರಡು) : **[16]**

(1) ಇಳಿಮುಖದ ಅಂಚಿನ ತುಷ್ಟಿಗುಣದ ಸಿದ್ಧಾಂತವನ್ನು ಊಹೆಯೊಂದಿಗೆ ಸ್ಪಷ್ಟಿಕರಿಸಿರಿ.

(2) ರಾಷ್ಟ್ರೀಯ ಉತ್ಪನ್ನದ ಅರ್ಥ ಹೇಳಿ, ರಾಷ್ಟ್ರೀಯ ಉತ್ಪನ್ನದ ವೈಶಿಷ್ಟ್ಯಗಳನ್ನು ಸ್ಪಷ್ಟಿಕರಿಸಿರಿ.

(3) ಸಾರ್ವಜನಿಕ ಖರ್ಚಿನ ಏರಿಕೆಗೆ ಕಾರಣಗಳನ್ನು ವಿವರಿಸಿರಿ.

◆◆◆